
ನಿಮ್ಮೊಡನೆ

# ‘ಐಐಎಸ್ಸಿ’ ಪ್ರಭೆಯಲ್ಲಿ ಮರೆಯಬಾರದ ಪ್ರಶ್ನೆಗಳು

**‘ಐಐಎಸ್ಸಿ’ ಜಾಗತಿಕವಾಗಿ ಪಡೆದಿರುವ ಮನ್ನಣೆಯ ಬಗ್ಗೆ ಹೆಮ್ಮೆಪಡುತ್ತಲೇ, ನಾಡಿನ ಉನ್ನತ ಶಿಕ್ಷಣದ ಸ್ಥಿತಿಗತಿಯನ್ನು ಒರೆಗೆ ಹಚ್ಚಬೇಕು. ನಮ್ಮ ವಿ.ವಿ.ಗಳು ವಿದ್ಯಾರ್ಥಿಗಳ ಮನೋವಿಕಾಸ ಮತ್ತು ಜ್ಞಾನಾಭಿವೃದ್ಧಿಗೆ ಪರಿಣಾಮಕಾರಿಯಾದ ಕೊಡುಗೆ ನೀಡುತ್ತಿವೆಯೆ ಎನ್ನುವ ಪ್ರಶ್ನೆಯನ್ನು ಕೇಳಿಕೊಳ್ಳಬೇಕು.**



ಈಶ್ವರ್

ಬೆಂಗಳೂರಿನ ಕೀರ್ತಿಕೇಂದ್ರಗಳಲ್ಲೊಂದಾದ ‘ಭಾರತೀಯ ವಿಜ್ಞಾನ ಸಂಸ್ಥೆ’ (ಐಐಎಸ್ಸಿ) ದೇಶದ ನಂ. 1 ವಿಶ್ವವಿದ್ಯಾಲಯ ಎನ್ನುವ ಕೀರ್ತಿಗೆ ಪಾತ್ರವಾಗಿರುವುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿ. ಜಾಗತಿಕ ಮಟ್ಟದಲ್ಲಿ ಕಳೆದ ವರ್ಷ 186ನೇ ರ‍್ಯಾಂಕ್‌ನಲ್ಲಿದ್ದ ‘ಐಐಎಸ್ಸಿ’, ಈ ಬಾರಿ 31 ಸ್ಥಾನಗಳ ಜಿಗಿತ ಕಂಡು 155ನೇ ಸ್ಥಾನ ಪಡೆದಿರುವುದು ಸಾಮಾನ್ಯ ಸಾಧನೆಯಲ್ಲ. ಅತ್ಯಂತ ವೇಗವಾಗಿ ಬೆಳೆಯುತ್ತಿರುವ ದಕ್ಷಿಣ ಏಷ್ಯಾದ ವಿಶ್ವವಿದ್ಯಾಲಯ ಎನ್ನುವ ಶ್ರೇಯವೂ ‘ಐಐಎಸ್ಸಿ’ಗೆ ಸಂದಿದೆ.

ವಿಶ್ವದ ಅತ್ಯುತ್ತಮ ವಿಶ್ವವಿದ್ಯಾಲಯಗಳ ಯಾದಿಯನ್ನು ಲಂಡನ್ ಮೂಲದ ‘ಕ್ವಾಕಾರೆಲ್ಲಿ ಸೈಮಂಡ್ಸ್’ (ಕ್ಯೂಎಸ್) ಪ್ರತಿವರ್ಷ ತಯಾರಿಸುತ್ತದೆ. ‘ಕ್ಯೂಎಸ್’ ಬಿಡುಗಡೆ ಮಾಡಿರುವ 2023ರ ಪಟ್ಟಿಯಲ್ಲಿ ವಿಶ್ವದ ಅಗ್ರ 1000 ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಭಾರತದ 27 ವಿ.ವಿ.ಗಳು ಸ್ಥಾನ ಪಡೆದಿವೆ. ಇವುಗಳಲ್ಲಿ ಬೆಂಗಳೂರಿನ ‘ಐಐಎಸ್ಸಿ’ ಬೆನ್ನಿಗಿರುವ ‘ಬಾಂಬೆ ಐಐಟಿ’ ಮತ್ತು ‘ದೆಹಲಿ ಐಐಟಿ’ಗಳು ಕ್ರಮವಾಗಿ 172 ಮತ್ತು 174ನೇ ರ‍್ಯಾಂಕ್ ಗಳಿಸುವ ಮೂಲಕ ಉತ್ತಮ ಸಾಧನೆ ತೋರಿವೆ. ಈ ಮೂರು ಸಂಸ್ಥೆಗಳು ಒಳಗೊಂಡಂತೆ ಭಾರತದ 9 ಸಂಸ್ಥೆಗಳಷ್ಟೇ ವಿಶ್ವದ ಮೊದಲ 300 ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಸ್ಥಾನ ಪಡೆಯಲು ಯಶಸ್ವಿಯಾಗಿವೆ. ಮದ್ರಾಸ್ (250), ಕಾನ್ಪುರ (264), ಖರಗ್‌ಪುರ (270), ರೂರ್ಕಿ (269), ಗುವಾಹಟಿ (284) ಮತ್ತು ಇಂದೋರ್ (296) ಐಐಟಿಗಳು ಅಗ್ರ 300 ವಿಶ್ವವಿದ್ಯಾಲಯಗಳಲ್ಲಿ ಸ್ಥಾನ ಪಡೆದಿವೆ. ‘ಮ್ಯಾಸಚೂಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ’, ‘ಕೇಂಬ್ರಿಡ್ಜ್ ವಿಶ್ವವಿದ್ಯಾಲಯ’ ಮತ್ತು ‘ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯ’ಗಳು ‘ಕ್ಯೂಎಸ್’ ರ‍್ಯಾಂಕ್ ಯಾದಿಯಲ್ಲಿ ಕ್ರಮವಾಗಿ ಮೊದಲ ಮೂರು ಸ್ಥಾನಗಳಲ್ಲಿವೆ.

ಜಾಗತಿಕವಾಗಿ ಪಡೆದಿರುವ ಮನ್ನಣೆಯ ಕಾರಣದಿಂದಾಗಿ ‘ಐಐಎಸ್ಸಿ’ ಬಗ್ಗೆ ಹೆಮ್ಮೆಪಡುತ್ತಲೇ, ನಾಡಿನ ಉನ್ನತ ಶಿಕ್ಷಣದ ಸ್ಥಿತಿಗತಿಯನ್ನು ಗಮನಿಸಬೇಕು. ಶತಮಾನದ ಇತಿಹಾಸ ಹೊಂದಿರುವ ವಿಶ್ವವಿದ್ಯಾಲಯದೊಂದಿಗೆ, ನಾಡು–ನುಡಿ ಕುರಿತ ಚಿಂತನೆ ಮತ್ತು ಅಧ್ಯಯನ–ಸಂಶೋಧನೆಗಳ ಕಾರಣಕ್ಕಾಗಿ ರೂಪುಗೊಂಡಿರುವ ವಿಶಿಷ್ಟ ವಿಶ್ವವಿದ್ಯಾಲಯವೂ ಸೇರಿದಂತೆ ಹತ್ತಾರು ವಿ.ವಿ.ಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ವಿಶ್ವವಿದ್ಯಾಲಯಗಳು ಗುಣಮಟ್ಟದ ಶಿಕ್ಷಣ ನೀಡುತ್ತಿವೆಯೇ? ವಿದ್ಯಾರ್ಥಿಗಳ ಮನೋವಿಕಾಸ ಮತ್ತು ಜ್ಞಾನಾಭಿವೃದ್ಧಿಗೆ ಪರಿಣಾಮಕಾರಿಯಾದ ಕೊಡುಗೆ ನೀಡುತ್ತಿವೆಯೆ? ಎನ್ನುವ ಪ್ರಶ್ನೆಗಳನ್ನು ಕೇಳಿಕೊಂಡಾಗ ದೊರೆಯುವ ಉತ್ತರ ನಿರಾಶಾದಾಯಕವಾದುದು.

ಇತ್ತೀಚಿನ ವರ್ಷಗಳಲ್ಲಿ ಯಾವೆಲ್ಲ ಕಾರಣಗಳಿಗಾಗಿ ನಮ್ಮ ವಿಶ್ವವಿದ್ಯಾಲಯಗಳು ಸುದ್ದಿಯಲ್ಲಿವೆ ಎನ್ನುವುದನ್ನು ನೆನಪಿಸಿಕೊಳ್ಳಿ. ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಜೊತೆಗೆ ಆಡಳಿತ ಮಂಡಳಿಯ ಲಂಚಗುಳಿತನದ ಬಗ್ಗೆ ವಿದ್ಯಾರ್ಥಿಗಳೂ ದನಿಯೆತ್ತಿದ ಪ್ರಸಂಗಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯ ಸಾಕ್ಷಿಯಾಗಿದೆ. ಫೆಲೋಶಿಪ್ ಬಾಕಿ ಉಳಿಸಿಕೊಂಡಿರುವ ಬಗ್ಗೆ ಸಂಶೋಧನಾ ವಿದ್ಯಾರ್ಥಿಗಳ ಪ್ರತಿಭಟನೆಯನ್ನು ಹಾಗೂ ಸಹಾಯಧನ ನೀಡದಿರುವ ಮೂಲಕ ದಲಿತ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣದಿಂದ ವಂಚಿಸಲಾಗುತ್ತಿದೆ ಎನ್ನುವ ಆರೋಪವನ್ನು ಕನ್ನಡ ವಿ.ವಿ. ಎದುರಿಸಿದೆ. ಮೀಸಲಾತಿ ನಿಯಮಗಳನ್ನು ಗಾಳಿಗೆ ತೂರಿ ಬೋಧಕ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಸಿದ ಆರೋಪಕ್ಕೂ ವಿ.ವಿ. ಗುರಿಯಾಗಿದೆ.

ವಿಶ್ವವಿದ್ಯಾಲಯಗಳ ಕುಲಪತಿಗಳ ನೇಮಕಾತಿಗಳಲ್ಲಿ ಅಭ್ಯರ್ಥಿಗಳ ಶೈಕ್ಷಣಿಕ ಅರ್ಹತೆಗಿಂತಲೂ ಅವರು ಹೊಂದಿರುವ ರಾಜಕೀಯ ಪ್ರಭಾವ ಹಾಗೂ ಹಣಕಾಸಿನ ಶಕ್ತಿಯೇ ಬಹುತೇಕ ಸಂದರ್ಭಗಳಲ್ಲಿ ಮುನ್ನೆಲೆಗೆ ಬರುತ್ತಿದೆ. ಸಿಂಡಿಕೇಟ್ ಸದಸ್ಯರ ಆಯ್ಕೆಯಲ್ಲಿ ಶೈಕ್ಷಣಿಕ ಅರ್ಹತೆಗಿಂತಲೂ ರಾಜಕೀಯ ಒಲವು – ನಿಲುವುಗಳೇ ಮುಖ್ಯವಾಗುತ್ತಿವೆ. ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್‌ಗಳಂತೂ ವರ್ಷದಿಂದ ವರ್ಷಕ್ಕೆ ಘನತೆ ಕುಗ್ಗಿಸಿಕೊಳ್ಳುತ್ತಲೇ ಇವೆ. ಆಡಳಿತ ಪಕ್ಷದ ಜೊತೆ ನಂಟು ಹೊಂದಿರುವ ಉದ್ಯಮಿ ಮತ್ತು ರಾಜಕಾರಣಿಗಳನ್ನು ಗೌರವಿಸುವ ‘ರಾಜಕಾರಣ ಲಾಭ’ದ ಗೌರವ ಡಾಕ್ಟರೇಟ್‌ಗಳು ಚಾಲ್ತಿಯಲ್ಲಿರುವ ಸಂದರ್ಭ ಇಂದಿನದು.

ಉಪನ್ಯಾಸಕರು ಮತ್ತು ಪ್ರಾಧ್ಯಾಪಕರ ಹುದ್ದೆಗಳು 40 ಲಕ್ಷದಿಂದ 1 ಕೋಟಿ ರೂಪಾಯಿವರೆಗಿನ ಲಂಚಕ್ಕೆ ಬಿಕರಿಯಾಗುತ್ತಿವೆ ಎನ್ನುವ ವರದಿಗಳು ಇತ್ತೀಚೆಗಷ್ಟೇ ಪ್ರಕಟಗೊಂಡಿದ್ದವು. ಜ್ಞಾನದ ಉತ್ಪತ್ತಿ ಮತ್ತು ಹಂಚಿಕೆಯ ಕೇಂದ್ರಗಳಾಗಬೇಕಿದ್ದ ವಿ.ವಿ.ಗಳು ತಮ್ಮ ಮೂಲ ಉದ್ದೇಶವನ್ನೇ ಮರೆತಂತೆ ವರ್ತಿಸುತ್ತಿರುವುದು ಕಳವಳ ಹುಟ್ಟಿಸುವ ಸಂಗತಿ. ಪ್ರಸ್ತುತ, ಪಠ್ಯಪುಸ್ತಕ ಪರಿಷ್ಕರಣೆಯ ರಾಡಿಯನ್ನು ಗಮನಿಸಿದರೆ, ಪ್ರಾಥಮಿಕ ಹಂತದಲ್ಲಿ ನೈತಿಕತೆ ಮತ್ತು ಶೈಕ್ಷಣಿಕ ಶಿಸ್ತನ್ನು ಕಾಪಾಡಿಕೊಳ್ಳುವುದು ನಮಗೆ ಸಾಧ್ಯವಾಗದಿರುವುದು ಸ್ಪಷ್ಟವಾಗುತ್ತದೆ. ಪ್ರಾಥಮಿಕ ಶಿಕ್ಷಣದ ತಳಹದಿಯ ಬಗ್ಗೆಯೇ ಪ್ರಶ್ನೆಗಳಿರುವಾಗ, ಉನ್ನತ ಶಿಕ್ಷಣ ಗುಣಮಟ್ಟದಿಂದ ಕೂಡಿರಬೇಕೆಂದು ನಿರೀಕ್ಷಿಸುವುದು ದುಬಾರಿ ಅಪೇಕ್ಷೆಯೇ ಸರಿ.

■ **ರಘುನಾಥ ಚ.ಹ.**